## ತುಮಕೂರಿನ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಅಭಿಮತ

# ತ್ಯಾಗದ ಮಹೋನ್ನತ ಶಕ್ತಿ ತಾಯಿ



ಬಸವ ಸಮಿತಿಯ ಅನುಭವ ಮಂಟಪದಲ್ಲಿ ಭಾನುವಾರ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಿತು.

■ **ವಿಕ ಸುದ್ದಿಲೋಕ** ಬೆಂಗಳೂರು

ತ್ಯಾಗದ ಮಹೋನ್ನತವಾದ ಶಕ್ತಿ ತಾಯಿಯಾಗಿದ್ದು, ಆಕೆಗಿಂತ ಶ್ರೇಷ್ಠವಾದವರು ಈ ಜಗತ್ತಿನಲ್ಲಿ ಮತ್ತೊಬ್ಬರಿಲ್ಲ ಎಂದು ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಅಭಿಪ್ರಾಯಪಟ್ಟರು.

ಅವ್ವ ಸೇವಾ ಟ್ರಸ್ಟ್ ವತಿಯಿಂದ ಬಸವ ಸಮಿತಿಯ ಅನುಭವ ಮಂಟಪದಲ್ಲಿ ಹಮ್ಮಿಕೊಂಡಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು. ''ಇತ್ತೀಚಿನ ದಿನಗಳಲ್ಲಿ ಕೆಲವರು ತಮ್ಮ ವಯಸ್ಸಾದ ತಂದೆ-ತಾಯಿಯನ್ನು ಅನಾಥಾಶ್ರಮ, ವೃದ್ಧಾಶ್ರಮಗಳಿಗೆ ಸೇರಿಸುತ್ತಿದ್ದಾರೆ. ವ್ಯಕ್ತಿಯೊಬ್ಬ ಕಳೆದು ಹೋಗಿದ್ದ ನಾಯಿ ಮರಿಯನ್ನು ಹುಡುಕಿ ಕೊಟ್ಟವರಿಗೆ ಮೂರು ಲಕ್ಷ ನೀಡುವುದಾಗಿ ಪ್ರಕಟಿಸಿದ್ದ. ಆ ನಾಯಿಯನ್ನು ಹುಡುಕಿ ಹೊರಟಾಗ ಅದು ವೃದ್ಧಾಶ್ರಮವೊಂದರಲ್ಲಿತ್ತು. ಆ ಸ್ಥಳಕ್ಕೆ ಹೋದ ನಾಯಿ ಕಳೆದುಕೊಂಡಾತನಿಗೆ ತನ್ನ ತಾಯಿ ಇರುವುದು ಅರಿವಿಗೆ ಬಂತು. ಜನ್ಮ ನೀಡಿದ ತಾಯಿಯನ್ನು ವೃದ್ಧಾಶ್ರಮದಲ್ಲಿ ಹಾಕಿ, ನಾಯಿ ಹುಡುಕಿ ಕೊಟ್ಟವರಿಗೆ 3 ಲಕ್ಷ ಕೊಡಲು ಹೊರಟವನಿಗೆ ಸಮಾಜ ಛೀಮಾರಿ ಹಾಕಿತು. ಬಳಿಕ ವೃದ್ಧಾಶ್ರಮದಲ್ಲಿ ಕ್ಷಮೆ ಕೇಳಿ ತಾಯಿಯನ್ನು ಮನೆಗೆ ಕರೆದುಕೊಂಡು ಬಂದ,'' ಎಂದು ನೈಜ ಘಟನೆಯೊಂದನ್ನು ವಿವರಿಸಿದರು.

### ಪ್ರಶಸ್ತಿ ವಿತರಣೆ

ನಿವೃತ್ತ ವಿಜ್ಞಾನಿ ಎ.ಎಸ್.ಕಿರಣ್‌ಕುಮಾರ್, ಡಾ. ಎಸ್.ಜಿ.ಸುಶೀಲಮ್ಮ, ನಿವೃತ್ತ ಪ್ರಾಧ್ಯಾಪಕ ಪ್ರೊ. ಎಚ್.ಎಸ್.ಶಿವಪ್ರಕಾಶ್, ನಾಡೋಜ ಡಾ. ಬಿ.ಕೆ.ಸುಮಿತ್ರ, ಕ್ರೀಡಾಪಟು ಅರ್ಜುನ್ ದೇವಯ್ಯ, ಪ್ರೇಮಾ ಸೋಮಸುಂದರ್, ರಂಗಭೂಮಿ ಕಲಾವಿದರಾದ ಪ್ರತಿಭಾ ನಾರಾಯಣ್, ಜನಪದ ಗಾಯಕ ತಂಬೂರಿ ಜವರಯ್ಯ ದಂಪತಿ, ಉದಯಭಾನು ಕಲಾಸಂಘದ ಸಂಸ್ಥಾಪಕ ಕಾರ್ಯದರ್ಶಿ ಎಂ.ನರಸಿಂಹಯ್ಯ ಅವರಿಗೆ 'ಅವ್ವ' ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಸಂಬಂಧಪಟ್ಟಂತೆ ಅಧಿಕಾರಿಗಳು ಹೇಳಿದ್ದಾರೆ.

ಬಿಡುಗಡೆಯಾಗಿ ಅಪರಾಧ ಕೃತ್ಯ ಮುಂದುವರಿಸಿದ್ದ

### ತುಮಕೂರಿನ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಅಭಿಮತ

# ತ್ಯಾಗದ ಮಹೋನ್ನತ ಶಕ್ತಿ ತಾಯಿ



ಬಸವ ಸಮಿತಿಯ ಅನುಭವ ಮಂಟಪದಲ್ಲಿ ಭಾನುವಾರ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಿತು.

■ **ವಿಕ ಸುದ್ದಿಲೋಕ** ಬೆಂಗಳೂರು

ತ್ಯಾಗದ ಮಹೋನ್ನತವಾದ ಶಕ್ತಿ ತಾಯಿಯಾಗಿದ್ದು, ಆಕೆಗಿಂತ ಶ್ರೇಷ್ಠವಾದವರು ಈ ಜಗತ್ತಿನಲ್ಲಿ ಮತ್ತೊಬ್ಬರಿಲ್ಲ ಎಂದು ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಅಭಿಪ್ರಾಯಪಟ್ಟರು.

ಅವ್ವ ಸೇವಾ ಟ್ರಸ್ಟ್ ವತಿಯಿಂದ ಬಸವ ಸಮಿತಿಯ ಅನುಭವ ಮಂಟಪದಲ್ಲಿ ಹಮ್ಮಿಕೊಂಡಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು. ''ಇತ್ತೀಚಿನ ದಿನಗಳಲ್ಲಿ ಕೆಲವರು ತಮ್ಮ ವಯಸ್ಸಾದ ತಂದೆ-ತಾಯಿಯನ್ನು ಅನಾಥಾಶ್ರಮ, ವೃದ್ಧಾಶ್ರಮಗಳಿಗೆ ಸೇರಿಸುತ್ತಿದ್ದಾರೆ. ವ್ಯಕ್ತಿಯೊಬ್ಬ ಕಳೆದು ಹೋಗಿದ್ದ ನಾಯಿ ಮರಿಯನ್ನು ಹುಡುಕಿ ಕೊಟ್ಟವರಿಗೆ ಮೂರು ಲಕ್ಷ ನೀಡುವುದಾಗಿ ಪ್ರಕಟಿಸಿದ್ದ. ಆ ನಾಯಿಯನ್ನು ಹುಡುಕಿ ಹೊರಟಾಗ ಅದು ವೃದ್ಧಾಶ್ರಮವೊಂದರಲ್ಲಿತ್ತು. ಆ ಸ್ಥಳಕ್ಕೆ ಹೋದ ನಾಯಿ ಕಳೆದುಕೊಂಡಾತನಿಗೆ ತನ್ನ ತಾಯಿ ಇರುವುದು ಅರಿವಿಗೆ ಬಂತು. ಜನ್ಮ ನೀಡಿದ ತಾಯಿಯನ್ನು ವೃದ್ಧಾಶ್ರಮದಲ್ಲಿ ಹಾಕಿ, ನಾಯಿ ಹುಡುಕಿ ಕೊಟ್ಟವರಿಗೆ 3 ಲಕ್ಷ ಕೊಡಲು ಹೊರಟವನಿಗೆ ಸಮಾಜ ಛೀಮಾರಿ ಹಾಕಿತು. ಬಳಿಕ ವೃದ್ಧಾಶ್ರಮದಲ್ಲಿ ಕ್ಷಮೆ ಕೇಳಿ ತಾಯಿಯನ್ನು ಮನೆಗೆ ಕರೆದುಕೊಂಡು ಬಂದ,'' ಎಂದು ನೈಜ ಘಟನೆಯೊಂದನ್ನು ವಿವರಿಸಿದರು.

## ಪ್ರಶಸ್ತಿ ವಿತರಣೆ

ನಿವೃತ್ತ ವಿಜ್ಞಾನಿ ಎ.ಎಸ್.ಕಿರಣ್‌ಕುಮಾರ್, ಡಾ. ಎಸ್.ಜಿ.ಸುಶೀಲಮ್ಮ, ನಿವೃತ್ತ ಪ್ರಾಧ್ಯಾಪಕ ಪ್ರೊ. ಎಚ್.ಎಸ್.ಶಿವಪ್ರಕಾಶ್, ನಾಡೋಜ ಡಾ. ಬಿ.ಕೆ.ಸುಮಿತ್ರ, ಕ್ರೀಡಾಪಟು ಅರ್ಜುನ್ ದೇವಯ್ಯ, ಪ್ರೇಮಾ ಸೋಮಸುಂದರ್, ರಂಗಭೂಮಿ ಕಲಾವಿದರಾದ ಪ್ರತಿಭಾ ನಾರಾಯಣ್, ಜಾನಪದ ಗಾಯಕ ತಂಬೂರಿ ಜವರಯ್ಯ ದಂಪತಿ, ಉದಯಭಾನು ಕಲಾಸಂಘದ ಸಂಸ್ಥಾಪಕ ಕಾರ್ಯದರ್ಶಿ ಎಂ.ನರಸಿಂಹಯ್ಯ ಅವರಿಗೆ 'ಅವ್ವ' ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.